ಎಂ ವಿ ಸಿ ನಂಃ 428/2022

ಪಿ ಡಬ್ಲ್ಯೂ-2

**(ಇಂದು ದಿನಾಂಕ 11-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರ ಸಂ.** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಅಂಗನ್ಯೂನ್ಯತೆ ಪ್ರಮಾಣ ಪತ್ರ | ನಿಪಿ.11 |
| 2 | ಭವಿಷ ವೈದ್ಯಕೀಯ ಖರ್ಚಿನ ಪ್ರಮಾಣ ಪತ್ರ | ನಿಪಿ.12 |
| 3 | ಅರ್ಜಿದಾರರ ವೈದ್ಯಕೀಯ ದಾಖಲೆ ಹಾಗೂ ಎಕ್ಸರೇ ದಾಖಲೆಯನ್ನು ಒಟ್ಟಾರೆಯಾಗಿ | ನಿಪಿ.13 |

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳುವಿನ ಹೆಸರು ಶರೀಫಸಾಬ ಸುಂಕದ. ಸದರಿಯುವರು ದಿಃ 25-04-2022 ರಂದು ದಾಖಲಾಗಿದ್ದು 10 ದಿನಗಳ ನಂತರ ಅವರು ಬಿಡುಗಡೆಯಾಗಿರುತ್ತಾರೆ.

ಸದರಿಯವರು 10 ರಿಂದ 12 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ದಿನಾಂಕಃ 10-05-2022 ಎಷ್ಟು ಬಾರಿ ಚಿಕಿತ್ಸೆಗೆ ಬಂದಿದ್ದಾರೆ ಎಂದರೆ ಸಾಕ್ಷಿಯು ಅವರು ಆಗಾಗ ನಿರ್ದೇಶನದಂತೆ ಚಿಕಿತ್ಸೆ ಬಂದಿದ್ದಾರೆ ಎಂದು ಹೇಳುತ್ತಾರೆ. ಯಾವ ಯಾವ ದಿನಾಂಕದಂದು ಬಂದಿದ್ದಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಆ ಬಗ್ಗೆ ನಾನು ದಾಖಲೆ ಹಾಜರು ಪಡಿಸಿಲ್ಲ.

ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಆದ ಮೇಲೆ ಅರ್ಜಿದಾರರು ನಮ್ಮಲ್ಲಾಗಲಿ ಅಥವಾ ಬೇರೆ ಆಸ್ಪತ್ರೆಯಲ್ಲಾಗಲೀ ನಿಪಿ.11 ನ್ನು ಕೊಡುವವರೆಗೂ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿದಾರ ನನ್ನ ಬಳಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡುವ ಬಗ್ಗೆ ದಾಖಲೆಗಳನ್ನು ರೋಗಿಗಳಿಗೆ ಕೊಡುತ್ತೇವೆ ಎಂದರೆ ಸರಿ. ಅರ್ಜಿದಾರರು ನನ್ನ ಬಳಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ನಂತರ ಬಿಡುಗಡೆ ಆದ ಮೇಲೆ ನನ್ನ ಬಳಿ ಚಿಕಿತ್ಸೆಗೆ ಬಂದಿಲ್ಲ ಎಂದರೆ ಸರಿಯಲ್ಲ.

ಸದರಿ ಅರ್ಜಿದಾರರ ನನ್ನ ಬಳಿ ಮುಂದುವರೆದ ಚಿಕಿತ್ಸೆ ಪಡೆಯದೇ ಇರುವ ಕಾರಣ ನಿಪಿ.11 ರಲ್ಲಿ ನಮೂದು ಮಾಡಿದ ಅಂಗನ್ಯೂನ್ಯತೆ ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರರು ಸಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಮೂದು

ಮಾಡಿದ್ದು ಆ ದಾಖಲೆ ಅವಶ್ಯಕತೆ ಬಿದ್ದರೆ ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. ನಾನು ಸದರಿ ದಾಖಲೆಯನ್ನು ನೋಡಿಲ್ಲ ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿಯವರು ಸಿಟಿ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದ 2(ಬಿ) ಪ್ಯಾರಾದಲ್ಲಿ ಅಪಘಾತದಿಂದ ಆಗುವ ಗಾಯ ಅಲ್ಲ ಎಂದರೆ ಸಾಕ್ಷಿ ನಾನು ನೋಡಿದ ಹಾಗೆ ಅದು ಅಪಘಾತದ ಗಾಯ ಎಂದು ಹೇಳುತ್ತಾರೆ. ಸದರಿಯವರು ಅಪಘಾತವಾದ ತಕ್ಷಣ ನಮ್ಮ ಬಳಿ ಚಿಕಿತ್ಸೆ ಗೆ ಬಂದಿದ್ದರು ಎಂದರೆ ಸರಿ. ಸದರಿಯವರು ಮೋಟರ ಸೈಕಲ ಮೇಲಿಂದ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಎಂದು ನನಗೆ ಹೇಳಿದ್ದರು ಎಂದರೆ ನನಗೆ ನೆನಪಿಲ್ಲ ಆದರೆ ಅಪಘಾತವಾಗಿದೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ.

ಬೈಕಿನಲ್ಲಿ ತಾವೇ ಬಿದ್ದು ಬಂದಿದ್ದೆವೆ ಎಂದು ಗಾಯಾಳು ಹೇಳಿದಾಗ ನಾವು ಅದನ್ನು ಅಪಘಾತದ ಹಿನ್ನಲೆ ಎಂದು ಬರೆಂದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಮೂರನೇ ಪ್ಯಾರಾದಲ್ಲಿ ಹೇಳಿರುವ ಯಾವುದೇ ತೊಂದರೆಗಳು ಹಾಗೂ ಚಿಕಿತ್ಸೆ ಆತನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಪರೀಕ್ಷೆ

ಮಾಡದೇ ಸುಳ್ಳು ಅಂಗನ್ಯೂನ್ಯತೆ ಕೊಟ್ಟಿದ್ದನೆ ಎಂದರೆ ಸರಿಯಲ್ಲ.

ಪ್ರತಿಶತಃ 31.33 ಅಂಗನ್ಯೂನ್ಯತೆ ಲೆಪ್ಟಲೊವರದಿಂದ ಆಗಿದೆ ಎಂದರೆ ಸರಿ. ಅದನ್ನು ಸಂಪೂರ್ಣ ದೇಹಕ್ಕೆ ಹೋಲಿಸಿದಾಗ 1/3 ಆಗುತ್ತದೆ ಎಂದರೆ ಸರಿಯಲ್ಲ. ನಿಪಿ.11 ಮಾರ್ಗಸೂಚಿ ಪ್ರಕಾರ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.12 ನ್ನು ಸಹ ಅರ್ಜಿದಾರರಿಗೆ ಸಹಾಯ ಮಾಡಲು ಕೊಟ್ಟಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.